೧೦೦ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಉನ್ನತೀಕರಿಸಲು ಯೋಜಿಸಲಾಗಿದೆ.

ಅನಿಗೋಳ ಗ್ರಾಮಕ್ಕೆ ೧೯೯೦-೯೧ನೇ ಸಾಲಿನಲ್ಲಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಕ್ಕೆ ಮಂಜೂರಾತಿ ನೀಡಲಾಗಿದೆ.

ಪ್ರಸ್ತಾವನೆ ಬಂದಲ್ಲಿ ಪರಿಗಣಿಸಲಾಗುವುದು.

ವಿಷಯ:- ರಾಜ್ಯದಲ್ಲಿರುವ ೧೦೦ ಹಾಸಿಗೆಗಳ ಆಸ್ಪತ್ರೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೩:- (೪೩೫)
ಶ್ರೀ ಡಿ.ಆರ್. ಪಾಟೀಲ್ (ಗದಗ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ೧೦೦ ಹಾಸಿಗೆಗಳ ಆಸ್ಪತ್ರೆಗಳನ್ನು ಜಿಲ್ಲಾ ಪರಿಷತ್ ಆಡಳಿತದಿಂದ ಹಿಂತೆಗೆದುಕೊಂಡು ಸರ್ಕಾರ ತಾನೇ ನಿರ್ವಹಿಸಲು ಪರಿಶೀಲಿಸುತ್ತಿದೆಯೇ?

ಆ) ಹಾಗಿದ್ದಲ್ಲಿ ೧೧ಳ ಹಾಸಿಗೆಗಳ ಗದಗ ಜನರಲ್ ಆಸ್ಪತ್ರೆಯನ್ನು ಸರ್ಕಾರ ವಹಿಸಿಕೊಳ್ಳಲು ತೀವ್ರ ಕ್ರಮ ಕೈಗೊಳ್ಳುವುದೆ?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯಮಂತ್ರಿಗಳು)

ಇಲ್ಲಾ ೧೦೦ಕ್ಕಿಂತ ಹೆಚ್ಚಿಗೆ ಹಾಸಿಗೆಗಳಿರುವ ಆಸ್ಪತ್ರೆಗಳನ್ನು ಸರ್ಕಾರವು ವಹಿಸಿಕೊಳ್ಳಲು ತೀರ್ಮಾನಿಸಿದೆ.

ಗದಗ ಆಸ್ಪತ್ರೆಯಲ್ಲಿ ೬೪ ಹಾಸಿಗೆಗಳಿರುತ್ತದೆ. ಸದರಿ ಆಸ್ಪತ್ರೆಯ ಹೆರಿಗೆ ವಿಭಾಗದಲ್ಲಿರುವ ೪೫ ಹಾಸಿಗೆಗಳನ್ನು ಒಟ್ಟುಗೂಡಿಸಿದಲ್ಲಿ ೧೦೯ ಹಾಸಿಗೆಗಳಾಗುತ್ತದೆ. ಈ ಆಸ್ಪತ್ರೆಯನ್ನು ಜಿಲ್ಲಾಪರಿಷತ್ ವ್ಯಾಪ್ತಿಯಿಂದ ಸರ್ಕಾರದ ವಶಕ್ಕೆ ತೆಗೆದು ಕೊಳ್ಳಲು ಪರಿಶೀಲಿಸಲಾಗುತ್ತಿದೆ.

ವಿಷಯ:- ಕಡಸು ಉತ್ಪಾದನಾ ಮತ್ತು ತರಬೇತಿ ಕೇಂದ್ರ ಅಭಿವೃದ್ಧಿ ಕಾರ್ಯಕ್ರಮಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೪:- (೫೧೨)
ಶ್ರೀವಾಟಾಳ್ ನಾಗರಾಜ್ (ಚಾಮರಾಜನಗರ)
ಮಾನ್ಯ ಪಶು ಸಂಗೋಪನೆ ಮತ್ತು ಪಶುವೈದ್ಯಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬರಗಿ ಗ್ರಾಮದ ಹತ್ತಿರ ಕಡಸು ಉತ್ಪಾದನಾ ಮತ್ತು ತರಬೇತಿ ಕೇಂದ್ರ ಸ್ಥಾಪನೆಯಾಗಿ ಎಷ್ಟು ವರ್ಷಗಳಾಗಿವೆ?

ಆ) ಅದರಿಂದ ಆಗಿರುವ ಅಭಿವೃದ್ಧಿ ಕಾರ್ಯಕ್ರಮಗಳೇನು?

ಶ್ರೀ.ಕೆ.ಎಸ್. ನಾಗೇಗೌಡ
(ಪಶು ಸಂಗೋಪನಾ ರಾಜ್ಯಸಚಿವರು)

೭ ವರ್ಷಗಳಾಗಿರುತ್ತದೆ.

೧೯೮೬ ರಲ್ಲಿ ೨೭ ಮಿಶ್ರ ತಳಿ ಕಡಸು ಇದ್ದುವು. ಈಗ ಮಿಶ್ರತಳಿ ಕಡಸುಗಳಿವೆ. ಜಾಲ್ತಿ ಸಾಲಿಗೆ ೬೨,೦೦೦ ಲೀಟರ್ಸ್ ಹಾಲು ಉತ್ಪಾದನೆಯಾಗಿದೆ. ೪೧೨ ಟನ್ ಮೇವು ಉತ್ಪಾದನೆ ೩೫೯ ರೈತರಿಗೆ ಹೈನುಗಾರಿಕೆಯಲ್ಲಿ
೧೩೯ ಜನರಿಗೆ ಮೊಲ ಸಾಕಾಣಿಕೆಯಲ್ಲಿ
೩೬೦ ಜನರಿಗೆ ಕುರಿ ಸಾಕಾಣಿಕೆಯಲ್ಲಿ